(ಅ) ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಅಧ್ಯಕ್ಷರೆ, ಕೇಂದ್ರ ಸ್ಥಳವಾದ ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವ ಬಗ್ಗೆ ಸುಮಾರು 25 ವರ್ಷಗಳಿಂದಲೂ ಹೋರಾಟ ನಡೆಯುತ್ತಿದೆ. ಇತ್ತೀಚೆಗೆ ದಿನಾಂಕ 26 ರಂದು ವಕೀಲರ ಸಂಘದ ಅಧ್ಯಕ್ಷರು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಹೇಳಿದ್ದು, ಈಗಾಗಲೇ ನೋಟಿಸ್ ಸರ್ಕಾರದ ಗಮನಕ್ಕೂ ಬಂದಿದೆ. ಅದುದರಿಂದ 26ನೇ ತಾರೀಖಿನಂದೂ ನಡೆಯುವ ಈ ಉಪವಾಸ ಸತ್ಯಾಗ್ರಹವನ್ನು ತಡೆಯುವುದಕ್ಕೆ ಸರ್ಕಾರ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚನೆ ಮಾಡಿ ಆದಷ್ಟು ಬೇಗ ಇಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಲಿಚ್ಛಿಸುತ್ತೇನೆ.

ಅಧ್ಯಕ್ಷರು :— ಈ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀ ಅಶೋಕ್ ಕಾಟ್ವೆ, ಶ್ರೀ ಜಗದೀಶ್ ಶೆಟ್ಟರ್ ಹಾಗೂ ಚಂದ್ರಕಾಂತ ಬೆಲ್ಲದ್, ಒಟ್ಟು ನಾಲ್ಕು ಜನರು ನೋಟೀಸ್ ಕೊಟ್ಟಿದ್ದು ಇದನ್ನು ರೆಕಾರ್ಡ್ ಪರ್ಪಸ್‌ಗೆ ಮತ್ತು ಪತ್ರಿಕೆಯವರಿಗೆ ಹೇಳಿದ್ದೇನೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ನಾಲ್ಕು ಜನರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆಂದು ಗೊತ್ತಾಗಬೇಕೆಂದು ಹೇಳಿದ್ದೇನೆ. ಈಗ ಸರ್ಕಾರದ ಪರವಾಗಿ ಉತ್ತರ ಕೊಡಿ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ, ಧಾರವಾಡದಲ್ಲಿ ಒಂದು ಉಚ್ಚ ನ್ಯಾಯಾಲಯ ಪೀಠವನ್ನು ತೆಗೆಯಬೇಕೆಂಬುದು ಸರ್ಕಾರದ ತೀರ್ಮಾನವಾಗಿದೆ. ಸದನದಲ್ಲಿ ನಮ್ಮೆಲ್ಲರ ತೀರ್ಮಾನವೂ ಆಗಿದೆ. ಆದರೆ ಈ ತೀರ್ಮಾನದ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಂಥಾದ್ದು ರಾಜ್ಯ ಉಚ್ಚ ನ್ಯಾಯಾಲಯ ಸರ್ವೋಚ್ಚ ನ್ಯಾಯಾಲಯ ಮತ್ತು ಕೇಂದ್ರಸರ್ಕಾರದ್ದಾಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರೂ ಸಹ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಹಿಂದೆ ಎರಡು ಬಾರಿ ಬರೆದಿದ್ದಾರೆ. ಹಿಂದಿನ ಮುಖ್ಯ ನ್ಯಾಯಾಧೀಶರಿಗೂ ಪತ್ರ ಬರೆದಿದ್ದೇವೆ. ಇದರ ಬಗ್ಗೆ ಗಮನಿಸಬೇಕೆಂದೂ ಕೂಡ ಹೇಳಿದ್ದೇವೆ. ಆದರೆ ರಾಜ್ಯ ಉಚ್ಚ ನ್ಯಾಯಾಲಯದಿಂದ ಹಿಂದೆ ಎರಡು ಬಾರಿಯೂ ಈ ಪೀಠವನ್ನು ತೆರೆಯುವಂಥಾದ್ದಕ್ಕೆ ಒಪ್ಪಿಗೆ ಕೊಡಲಿಲ್ಲ. ಈ ವಿಚಾರ ಲೋಕಸಭೆಯಲ್ಲಿ ಮತ್ತು ರಾಜ್ಯ ಸಭೆಯಲ್ಲೂ ಚರ್ಚೆಯಾಗಿದೆ, ಮಾನ್ಯ ಬೊಮ್ಮಾಯಿಯವರು ಕೂಡ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದಿಂದ ಕೊಡಬೇಕಾದಂತಹ ಎಲ್ಲಾ ಮಾಹಿತಿಗಳನ್ನು ಕೊಟ್ಟಿದ್ದೇನೆ. ನಾನು ಈಗ ಕಾನೂನು ಮಂತ್ರಿಯಾಗಿ ಹೊಸದಾಗಿ ನೇಮಕವಾಗಿರುವಂತಹ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡುತ್ತೇನೆಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಉಚ್ಚ ನ್ಯಾಯಾಲಯದ ಮೇಲೆ ಒತ್ತಡವನ್ನು ತರಬೇಕೆಂದು ನನ್ನ ಕಳಕಳಿಯ ವಿನಂತಿಯಾಗಿದೆ.

ಶ್ರೀ ಎಂ.ಸಿ. ನಾಣಯ್ಯ:— ಮಾನ್ಯ ಅಧ್ಯಕ್ಷರೆ, ನಾವು ಮಾಡುತ್ತಿರುವ ಒತ್ತಡದಲ್ಲಿ ಕಡಿಮೆ ಮಾಡುವುದೇ ಇಲ್ಲ. ಒತ್ತಡವನ್ನು ಯಾವಾಗಲೂ ಹಾಕುತ್ತಿದ್ದೇವೆ.

ಶ್ರೀ ಜಗದೀಶ ಶೆಟ್ಟರ್:— ಹಿಂದೆ ಇದ್ದಂತಹ ನ್ಯಾಯಧೀಶರಾದ ಶ್ರೀ ಚಂದ್ರಶೇಖರ್ ಅವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು.

ಶ್ರೀ ಎಂ.ಸಿ. ನಾಣಯ್ಯ:— ಅದು ಹಳೆಯ ಕಥೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ತಾವು ಪ್ರಯತ್ನ ಮಾಡಬೇಕು.

ಶ್ರೀ ಎಂ.ಸಿ. ನಾಣಯ್ಯ ಮಾನ್ಯ:— ಯಡಿಯೂರಪ್ಪನವರೆ, ಇಲ್ಲಿ ನಾನು ಎಂದಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಯವರೆಂದಾಗಲಿ ಹೇಳುವಂತಹ ಪ್ರಶ್ನೆ ಇಲ್ಲ. ರಾಜ್ಯ ಸರ್ಕಾರದಿಂದ, ಈ ಸದನದ ಎಲ್ಲರೂ ಸೇರಿ ಇದನ್ನು ಮಾಡಬೇಕೆಂದು ಈಗಾಗಲೇ ತೀರ್ಮಾನವಾಗಿ 15 ವರ್ಷಗಳಿಗಿಂತಲೂ ಹೆಚ್ಚಿಗೆ ಆಗಿದೆ. ಈಗ ತೀರ್ಮಾನ ತೆಗೆದುಕೊಳ್ಳಬೇಕಾದಂಥವರು ರಾಜ್ಯಾಂಗಬದ್ಧವಾಗಿ ಯಾರೆಂಬುದು ನಿಮಗೆ, ನಮಗೆ ಗೊತ್ತಿದೆ. ನಾವು ಇದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಆ ಪ್ರಯತ್ನವನ್ನು ಮಾಡುತ್ತೇವೆ, ಆದರೆ ಕೇಂದ್ರ ಸರ್ಕಾರದಿಂದ ಇನ್ನು ಹೆಚ್ಚಿನ ಗಮನಹರಿಸಿದರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ತಾವು ಇಲ್ಲಿ ಮಾಡಬೇಕಾದಂತಹ ಕೆಲಸವನ್ನು ಮಾಡಿ ನಾವು ಅಲ್ಲಿ ಹೇಳುವಂಥ ಕೆಲಸವನ್ನು ನಾವು ಮಾಡುತ್ತೇವೆ. ನಾವು ಕೇಂದ್ರಸರ್ಕಾರದಿಂದ ಈ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ:— ನಾವು ಮಾಡಬೇಕಾದಂತಹ ಕೆಲಸ ಎಲ್ಲಾ ಆಗಿದೆ. ಕೇಂದ್ರಸರ್ಕಾರದಿಂದ ಮಾಡಬೇಕಾದಂತಹ ಕೆಲಸವೆಂದರೆ ನಾನು ಇನ್ನು ಒಂದು ಹೆಜ್ಜೆ ಮುಂದೆಹೋಗಿ ಹೇಳಿದರೆ ತಪ್ಪಾಗುತ್ತದೆ. ಆದುದರಿಂದ ದಯಮಾಡಿ ಅದು ಬೇಡ, ಆದುದರಿಂದ ಈ ಸಂದರ್ಭದಲ್ಲಿ ಹೇಳುವಂಥಾದ್ದು ಸರ್ವೋಚ್ಚ ನ್ಯಾಯಾಲಯ ತೀರ್ಮಾನ ತೆಗೆದುಕೊಂಡ ಮೇಲೆ ಕೇಂದ್ರಸರ್ಕಾರದವರು ತೀರ್ಮಾನ ಕೊಡುತ್ತಾರೆ. ನಾವು ಅದರ ಬಗ್ಗೆ ಗಮನಹರಿಸೋಣ.